

(6ನೇ ಪುಟದಿಂದ)

ಪೌರಾಣಿಕ ಘಟನೆಗೆ ಪೂರಕವಾಗಿ ಅಂದಿನಿಂದ ಉತ್ಸವದ ಅಂತ್ಯದ ತನಕ ಸ್ತ್ರೀಯರಿಗೆ ಈ ಕ್ಷೇತ್ರಕ್ಕೆ ಪ್ರವೇಶ ಇಲ್ಲ. ಉತ್ಸವದ ಕೊನೆಯ ದಿನದಂದು ಸ್ವಯಂಭೂ ಲಿಂಗಕ್ಕೆ ಅಷ್ಟಬಂಧ ದ್ರವ್ಯ ಸಹಿತ ಚಂದನವನ್ನು ಹಾಕಿ ಕಲಶವನ್ನು ಕವುಚಿ ಹಾಕಿ ಆಲಿಂಗನ ಪೂಜೆಯೆಂಬ ಗುಪ್ತ ಪೂಜೆಯನ್ನು ನಡೆಸುತ್ತಾರೆ. ಈ ಪೂಜೆಯನ್ನು ಭಕ್ತರು ಕಾಣಬಾರದೆಂಬ ನಂಬಿಕೆ ಇದೆ. ಅನಂತರ ಕುರಿಚ್ಚನ್ ಸಮುದಾಯದ ಅನೇಕ ಮಂದಿ ಯಾಗ ಶಾಲೆಯನ್ನು ಹಾಳು ಮಾಡುವ ಮೂಲಕ ಉತ್ಸವ ಮುಗಿಯುತ್ತದೆ.

ದಕ್ಷಯಜ್ಞದ ಪೌರಾಣಿಕ ಕಥೆಯ ಆಧಾರದಲ್ಲಿರುವ ಈ ಕ್ಷೇತ್ರದ ಹೆಸರು ಮೂಲದಲ್ಲಿ ‘ಕೂಡಿಯಾರ್’ (ಎಲ್ಲರೂ ಒಟ್ಟು ಸೇರುವುದು) ಎಂದು ಪ್ರಚಲಿತದಲ್ಲಿತ್ತು. ತದನಂತರ ಕೊಟ್ಟಿಯಾರ್ ಎಂದು ಪರಿವರ್ತಿತವಾಯಿತು ಎನ್ನಲಾಗಿದೆ.

ಇಲ್ಲಿ ಇನ್ನೂ ಒಂದು ಐತಿಹ್ಯವಿದೆ. ಹಿಂದೆ ಕುರಿಚ್ಚನ್ ನಾಯಾಡಿ ಎಂಬಾತ ಸ್ವಯಂಭೂ ಲಿಂಗದಲ್ಲಿ ತನ್ನ ಕತ್ತಿಯನ್ನು ಮಸೆಯುತ್ತಿದ್ದಾಗ, ಕಲ್ಲಿನಿಂದ ರಕ್ತ ಒಸರಿತು. ಬೆದರಿದ ನಾಯಾಡಿ, ಊರವರನ್ನು ಸೇರಿಸಿ, ಪಡಿಞಾಟಿಲ್ಲಂ ತಂತ್ರಿಗಳ ಸಹಿತ ಆ ಪ್ರದೇಶಕ್ಕೆ ಬಂದನು. ತಂತ್ರಿಗಳ ಆದೇಶದಂತೆ ರಕ್ತ ಒಸರುವುದನ್ನು ನಿಲ್ಲಿಸಲು ಧಾರಾಳ ನೀರು, ಹಾಲು ಹಾಗೂ ದನದ ತುಪ್ಪವನ್ನು ಸುರಿದರೂ ರಕ್ತ ಒಸರುವುದು ಕಡಿಮೆಯಾಗಲಿಲ್ಲ. ನಂತರ ಎಳನೀರು ಸುರಿದಾಗ ರಕ್ತ ಒಸರುವುದು ನಿಂತಿತು. ಆಗಲೇ ಲಿಂಗದ ಸುತ್ತಲೂ ಸರೋವರ ನಿರ್ಮಾಣವಾಗಿತ್ತು. ಇದರ ಪ್ರತೀಕವಾಗಿ ವಸಂತೋತ್ಸವ ಆಚರಣೆ ನಡೆಯುತ್ತದೆ. ಉತ್ಸವದಲ್ಲಿ ಮೊಣಕಾಲಿನ ತನಕ ನೀರಿರುವ ಸರೋವರದಲ್ಲಿರುವ ಶಿವಲಿಂಗಕ್ಕೆ ಅನೇಕ ದ್ರವ್ಯಗಳಿಂದ ಅಭಿಷೇಕ ನಡೆಯುತ್ತದೆ.

ಉತ್ಸವಕ್ಕಾಗಿ ಹುಲ್ಲು ಹಾಗೂ ಮಡಲುಗಳನ್ನು ಹಾಸಿದ ಎರಡು ಛಾವಣಿಯ ಕುಟೀರಗಳನ್ನು ನಿರ್ಮಿಸಲಾಗುತ್ತದೆ. ಅವುಗಳನ್ನು ಕಯ್ಯಾಲಗಳ್ ಎಂದು ಕರೆಯಲಾಗುತ್ತದೆ. ಇವುಗಳಲ್ಲಿ ತಂತ್ರಿಗಳು, ಪರಂಪರಾಗತ ಟ್ರಸ್ಟಿಗಳು, ಅರ್ಚಕಾದಿ ದೈವ ಚಾಕರಿಯವರು, ಕುರಿಚ್ಚನ್ ನಾಯಾಡಿ ಕುಟುಂಬದವರು ತಂಗುತ್ತಾರೆ. ವೀರಭದ್ರ ದಕ್ಷನ ರುಂಡ ಚೆಂಡಾಡಿದ ಕುರುಹಾಗಿ ವಾಳ್ ಖಡ್ಗದ ಭಂಡಾರ ಕ್ಷೇತ್ರಕ್ಕೆ ಆಗಮಿಸುತ್ತದೆ.

ಈ ಸಂದರ್ಭದಲ್ಲಿ ಮುನ್ನೂರಾಠನ್ ಹಾಗೂ ಐನೂರಾಠನ್ ಸಮುದಾಯದ ಮಂದಿ ವೀರಭದ್ರನ ವೇಷ ಧರಿಸಿ ಮೆರವಣಿಗೆಯಲ್ಲಿ ಸಾಗುತ್ತಾರೆ. ಲಿಂಗಕ್ಕೆ ತುಪ್ಪಾಭಿಷೇಕ ಮಾಡುವ ಮನೆತನದ ಮಂದಿ 27 ದಿನಗಳ ವ್ರತಾಚರಣೆ ಮಾಡಬೇಕೆಂಬ ನಿಬಂಧನೆ ಇದೆ. ಸ್ವಯಂಭೂ ಲಿಂಗಕ್ಕೆ ತುಪ್ಪದ ಅಭಿಷೇಕ ಮಾಡುವ ಕಾರ್ಯವನ್ನು ನೈಯಾಟಂ ಎನ್ನಲಾಗುತ್ತದೆ.

ಇದೇ ರೀತಿ ನೀರೇಳುನಳ್ಳತ್ತ್, ವಾಳ್ವರಾವ್, ನೈಯಾಟ್, ಭಂಡಾರಂ ಎಳುನಳ್ಳಾತ್, ಪಾಲಾಮೃತ್, ತಿರುವೋಣಂ, ರೇವತಿ, ಅಷ್ಟಮಿ, ರೋಹಿಣಿ ಆರಾಧನೆ, ಇಳನೀರಾಟ್ಟಂ, ಕಲಂವರವ್, ಕಳಭಾಟಂ, ಕಲಶಪೂಜಾ, ಕಲಶಾಟ್ ಈ ಉತ್ಸವದ ಪ್ರಧಾನ ಕ್ರಮಗಳಾಗಿವೆ.